ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ಆಗಲೇ ಹೇಳಿದ್ದೇನೆ. ಹೌಸಿಂಗ್‌ಬೋರ್ಡ್ ಬಗ್ಗೆ ಸರ್ಕಾರದ ನೀತಿಗೆ ಅನುಗುಣವಾಗಿ ಪುನಃ ಏನು ಒಂದು ವ್ಯವಸ್ಥೆಯನ್ನು ನಿರೂಪಿಸುತ್ತೇವೋ ಆಗ ಇವೆಲ್ಲವನ್ನೂ ಪರಿಶೀಲನೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಇದರಲ್ಲಿರುವ ಮಾನ್ಯ ಎಚ್. ಟಿ. ಕೃಷ್ಣಪ್ಪನವರ ಎರಡನೇ ಗಮನ ಸೆಳೆಯುವ ಸೂಚನೆಯನ್ನು ಸೋಮವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಆಗಲಿ.

Re : Death of a boy in Sandur Palace

ಶ್ರೀ ಕಾಗೋಡು ತಿಮ್ಮಪ್ಪ.—ಸೊಂಡೂರಿನ ಅರಮನೆಯಲ್ಲಿ ಒಬ್ಬ ಹುಡುಗನ ಕೊಲೆಯಾಗಿದೆ. ಅದರ ಬಗ್ಗೆ ಕಾಲ್ ಅಟೆನ್‌ಷನ್ ನೋಟೀಸು ಕಳುಹಿಸಿದ್ದೇನೆ. ಆ ಬಗ್ಗೆ ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

Re : Stoppage of drought Relief work at Gulbarga

ಶ್ರೀ ಬಾಪೂಗೌಡ ರಾಯಪ್ಪ.—ಗುಲ್ಬರ್ಗಾದಲ್ಲಿ ಈಗ ಒಂದು ತಿಂಗಳಿಂದಲೂ ಬರಗಾಲ ಕೆಲಸ ನಿಂತು ಹೋಗಿದೆ, ಏನೂ ಕೆಲಸ ನಡೆಯುತ್ತಾ ಇಲ್ಲ. ಈ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ಬರಗಾಲ ಪ್ರದೇಶಕ್ಕೆ ೬೩ ಕೋಟಿ ರೂಪಾಯಿ ಖರ್ಚು ಮಾಡಿದ್ದರೂ ಕೂಡ ಇನ್ನೂ ಸಮಾಧಾನವಿಲ್ಲ ಎಂದರೆ ಹೇಗೆ ?

ಶ್ರೀ ಬಾಪೂಗೌಡ ರಾಯಪ್ಪ.—ನಾನು ಹೇಳುವ ವಿಷಯ ಏನೆಂದರೆ ಅಲ್ಲಿ ಸುಮಾರು ಒಂದು ಸಾವಿರ ಮುಂದಿ ಡಿಪ್ಲೊಮಾ ಹೋಲ್ಡರ್ಸ್ ಮತ್ತು ಇಂಜಿನಿಯರ್ಸ್ ನಿರುದ್ಯೋಗಿಗಳಾಗಿದ್ದಾರೆ. ಅಲ್ಲಿ ಮೇಜರ್ ಇರ್ರಿಗೇಷನ್ ಕೆಲಸ ನಡೆಯುತ್ತಾ ಇಲ್ಲ ಎಂದು ನನಗೆ ಟೆಲಿಗ್ರಾಂ ಬಂದಿದೆ.

ಅಧ್ಯಕ್ಷರು.—ಅದನ್ನು ಕಾಲ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತನೆ ಮಾಡಿದ್ದೇನೆ.

ಶ್ರೀ ಬಾಪೂಗೌಡ ರಾಯಪ್ಪ.—ಅಧ್ಯಕ್ಷರೇ, ಕಂದಾಯ ಮಂತ್ರಿಗಳು ಈ ಬಗ್ಗೆ ಉತ್ತರ ಹೇಳಲು ತಯಾರಿದ್ದಾರೆ. ದಯವಿಟ್ಟು ಉತ್ತರ ಕೊಡಿಸಿಕೊಡಬೇಕು.

ಅಧ್ಯಕ್ಷರು. ಹಾಗಾಗುವುದಿಲ್ಲ. ಆ ವಿಷಯ ಬಂದಾಗ ನೋಡುತ್ತೇನೆ.

Re : Sale of three Buildings belonging to Mysore Palace

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಈಗಾಗಲೇ ಈ ಬಗ್ಗೆ ಮನವರಿಕೆ ಮಾಡಿಕೊಂಡಿದ್ದೇನೆ. ಅದು ಏನೆಂದರೆ ಮೈಸೂರು ಅರಮನೆಗೆ ಸೇರಿದಂಥ ೩ ಅರಮನೆಗಳ ಕಟ್ಟಡಗಳನ್ನು ಮಾರಾಟ ಮಾಡುವುದರ ವಿಷಯದ ಬಗ್ಗೆ ಹೇಳಬೇಕಾಗಿದೆ.

ಅಧ್ಯಕ್ಷರು.—ಆ ಅಲ್ಪಕಾಲಾವಧಿ ಪ್ರಶ್ನೆಯನ್ನು ಸರಕಾರಕ್ಕೆ ಕಳುಹಿಸಿದ್ದೇನೆ. ಅದಕ್ಕೆ ಉತ್ತರ ಬಂದ ತಕ್ಷಣ ಅಜೆಂಡಾದಲ್ಲಿ ಹಾಕಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ನಾನು ಕೇಳಿರತಕಂಥ ಪ್ರಶ್ನೆಗಳೆಲ್ಲಾ ಈಗಿನ ಪ್ರಶ್ನೆಗಳಿಂದ ಮೊದಲದೇಯದಾಗಿರಬಹುದು ಅಥವಾ ಎರಡದೆಯದಾಗಿರಬಹುದು. ಆದಕ್ಕೆ ಉತ್ತರ ಬರುವುದು ಇಷ್ಟು ನಿಧಾನವಾದರೆ ಹೇಗೆ ? ಈ ಪ್ರಶ್ನೆ ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು.—ಹಾಗಾದರೆ ಈಗ ಹಾಕಿರತಕ್ಕಂಥ ಪ್ರಶ್ನೆಗಳು ಪ್ರಾಮುಖ್ಯವಾದುವು ಅಲ್ಲವೆ ? ತಾವು ಹೇಳಿರುವುದನ್ನು ನೋಡಿದರೆ ನೀವು ಹೇಳಿದುದು ಒಂದು ಮಾತ್ರ ಇಂಪಾರ್ಟೆಂಟ್ಸ್ ಇದೆ ಎಂದು ಮನವರಿಕೆಯಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಆಡಳಿತಕ್ಕೆ ಸಂಬಂಧಪಟ್ಟ ವಿಷಯ. ಇದು ರಾಜ್ಯದ ಆಸ್ತಿ, ಆದುದರಿಂದ ಈ ಬಗ್ಗೆ ಹೇಳುತ್ತೇವೆ.

ಅಧ್ಯಕ್ಷರು.—ಆ ವಿಷಯ ಬೇಡ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಸಾರ್ವಜನಿಕರ ಆಸ್ತಿ. ಇದನ್ನು ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ಆದುದರಿಂದ ಇದರ ಬಗ್ಗೆ ಸರ್ಕಾರ ಗಮನ ಕೊಟ್ಟಿದೆಯೋ, ಇದರ ಬಗ್ಗೆ ಉತ್ತರ ಬರಲು ನಿದಾನವಾದರೆ ನಮಗೆ ಇರತಕ್ಕಂಥ ಕಷ್ಟ ಯಾವರೀತಿಯಾಗಿಯೂ ಬಗೆಹರಿಯುವುದಿಲ್ಲ. ಆದುದರಿಂದ ಇದರ ಬಗ್ಗೆ ಇಷ್ಟು ತೀವ್ರವಾಗಿ ಹೇಳುತ್ತಿದ್ದೇವೆ.

ಅಧ್ಯಕ್ಷರು.—ತಾವು ರೂಲ್ಸ್ ನೋಡಿ ಮಾತನಾಡಬೇಕು. ಯಾವಯಾವುದಕ್ಕೆ ಯಾವ ಯಾವ ತರಹ ನಿದರ್ಶನ ಕೊಡಬೇಕು ಎನ್ನುವುದು ರೂಲ್ಸ್ ನೋಡಿದರೆ ಗೊತ್ತಾಗುತ್ತದೆ.

NON-OFFICIAL RESOLUTION. RE: RESERVATION OF POSTS IN ALL INDUSTRIES OF MYSORE AREAS.

ಶ್ರೀ ಕೆ. ಶ್ರೀರಾಮುಲು.—(ಗಾಂಧೀನಗರ) ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ನಾನು ಒಂದು ರೆಸಲ್ಯೂಷನ್ ಮಾಡಿ ಅದರ ಮೇಲೆ ಮಾತನಾಡಿರತಕ್ಕಂಥ ಉದ್ದೇಶವಾದರೂ ಇಷ್ಟೆ. ರಾಜ್ಯದಲ್ಲಿರುವ ಖಾಸಗೀ ಅಥವಾ ಸರ್ಕಾರೀ ಕ್ಷೇತ್ರಗಳಲ್ಲಿನ ಎಲ್ಲಾ ಕೈಗಾರಿಕೆಗಳಲ್ಲೂ ಕೂಡ ಅನೇಕ ಸಂದರ್ಭಗಳಲ್ಲಿ ನಡೆಯುತ್ತಾ ಇರತಕ್ಕಂಥ ಒಂದೆರಡು ಉದಾಹರಣೆಗಳನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

ಈ ಬಗ್ಗೆ ಮೊದಲನೇ ಉದಾಹರಣೆ ಹೇಳುವುದಾದರೆ ನಂಜನಗೂಡಿನಲ್ಲಿ ಸುಜಾತ ಟೆಕ್ಸ್‌ಟೈಲ್ ಮಿಲ್ ಅನ್ನುವುದು ಇದೆ. ಆಲ್ಲಿ ಕೆಲಸಕ್ಕೆ ಜನರನ್ನು ಸೇರಿಸಿಕೊಳ್ಳುವಾಗ ಬಿರ್ಲಾ ಕಂಪನಿಯವರು ಗುಮಾಸ್ತರನ್ನೂ ಮತ್ತು ವಾಚ್‌ಮನ್‌ಗಳನ್ನೂ ಸಹ ಅವರ ದೇಶದಿಂದಲೇ ಕರೆದುಕೊಂಡು ಬಂದು ಇಲ್ಲಿ ನೇಮಕ ಮಾಡುತ್ತಾರೆ. ಅವರಿಗೆ ನೀವು ಇಲ್ಲಿ ಕಾರ್ಖಾನೆ ಇಡಬೇಡಿ, ವಸತಿ ಕೊಡುತ್ತೀರಿ, ಲೈಸೆನ್ಸ್ ಕೊಡುತ್ತೀರಿ, ವಿದ್ಯುಚ್ಛಕ್ತಿ ಕೊಡುತ್ತೀರಿ, ನೀರು ಕೊಡುತ್ತೀರಿ ಮತ್ತು ಅವರಿಗೆ ಬೇಕಾದಂಥ ಇನ್ನೂ ಹಲವು ಸೌಲಭ್ಯಗಳನ್ನು ಕೊಡುತ್ತೀರಿ, ಅವರಿಗೆ ಇಷ್ಟು ಸೌಲಭ್ಯಗಳನ್ನು ಕೊಟ್ಟು ಇಲ್ಲಿ ಕಾರ್ಖಾನೆ ನಡೆಸುತ್ತಾ ಇರುವಾಗ ಆ ಮಾಲೀಕರು ಯಾರು ಇದ್ದಾರೆ ಆ ಬಿರ್ಲಾ ಕಂಪನಿಯವರು ಎಲ್ಲರನ್ನೂ ಅಲ್ಲಿಂದಲೇ ಕರೆದುಕೊಂಡು ಬರುತ್ತಾರೆ. ಇದು ಎಷ್ಟರ ಮಟ್ಟಿಗೆ ಸಮಂಜಸವಾಗಿದೆ ಎನ್ನುವುದನ್ನು ತಾವು ನನ್ನ ಈ ಮೊದಲನೇ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕಾಗಿದೆ.

ಇನ್ನು ಇದರಲ್ಲಿ ಎರಡನೇ ವಿಷಯ ಏನೆಂದರೆ ಒಂದು ಪಕ್ಷ ನೀವು ಏನಾದರೂ ಇಲ್ಲಿಯವರೆಗೆ ಅಂದರೆ ಮೈಸೂರಿನವರಿಗೆ ಕೆಲಸ ಕೊಡಿ ಎಂದು ಹೇಳಿದರೆ ಆವಾಗ ಅವರು ಕೆಲಸ ಕೊಡುವ ಸಂಧರ್ಭ ಬಂದಾಗ ಇಲ್ಲಿಯ ವಾಚ್‌ಮನ್‌ನ್ನು ಕೆಲಸಕ್ಕೆ ತೆಗೆದುಕೊಂಡರೆ ಅವನಿಗೆ ೧೨೫ ರೂಪಾಯಿ ಸಂಬಳ ಕೊಡ ತ್ತಾರೆ, ಅವರು ಅಲ್ಲಿಂದ ಕರೆದುಕೊಂಡು ಬರುವ ವಾಚ್‌ಮನ್‌ಗೆ ೩೦೦ ರೂಪಾಯಿ ಸಂಬಳ ಕೊಡುತ್ತಾರೆ. ಹೀಗಿರುವುದರಿಂದ ನಾವು ಕೂಡ ಇದು ಎಷ್ಟರಮಟ್ಟಿಗೆ ಸಮಂಜಸವಾಗಿದೆ ಎನ್ನುವುದನ್ನು ನೋಡಿದರೆ ಈ ಪ್ರಶ್ನೆ ಉದ್ಭವವಾಗುತ್ತದೆ. ಮತ್ತು ಮೈಸೂರಿನ ಜನತೆಯ ವಿಷಯದಲ್ಲೂ ಸಹ ಈ ಪ್ರಶ್ನೆ ಸ್ಪಷ್ಟವಾಗಿ ಕಾಣುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ಸರ್ಕಾರದವರು ಇದರ ಬಗ್ಗೆ ಒಂದು ಕಾನೂನು ಮಾಡಿ ಯಾರೇ ಆಗಲಿ ಮೈಸೂರಿಗೆ ಬಂದು ಕಾರ್ಖಾನೆ ನಡೆಸುವುದಾದರೆ ಮೈಸೂರಿನಲ್ಲೇ ಹುಟ್ಟಿ, ಬೆಳೆದು ಮತ್ತು ವಿದ್ಯಾಭ್ಯಾಸ ಮಾಡಿದವರಿಗೆ ಒಟ್ಟು ಹುದ್ದೆಗಳ ಕನಿಷ್ಟ ಪಕ್ಷ ಶೇಕಡ ೮೦ ರಷ್ಟು ಹುದ್ದೆಗಳನ್ನು ಮೈಸೂರಿನವರಿಗಾಗಿ ಮೀಸಲಾಗಿಡುವಂತೆ ಒಂದು ಶಾಸನವನ್ನು ರಚಿಸಬೇಕೆಂಬುದೇ ನಾನು ತಂದಿರುವ ಈ ನಿರ್ಣಯದ ಉದ್ದೇಶ.

ಇನ್ನು ಈ ಬಗ್ಗೆ ಎರಡನೇ ಉದಾಹರಣೆ ಹೇಳುವುದಾದರೆ ಶ್ರೀರಾಮಪುರದಲ್ಲಿ ಸನ್‌ರೈಸ್ ಅನ್ನುವ ಒಂದು ಇಂಡಸ್ಟ್ರಿ ಇದೆ, ಆ ಕಾರ್ಖಾನೆಯಲ್ಲಿ ೧೬೦೦ ಜನ ಕೆಲಸ ಮಾಡುತ್ತಾರೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಈ ೧೬೦೦ ಜನರನ್ನೂ ಕೂಡ ನಾರ್ತ್ ಆರ್ಕಾಟ್ ಡಿಸ್ಟ್ರಿಕ್ಟ್, ರಾಮಪುರ